For more information visit
University Library Website
Web - uasbagrilibindia.org
E-mail- librarian@uasbangalore.edu.in

Vijayavani pg 07

ಸಚಿವ ಚಲುವರಾಯಸ್ವಾಮಿ ಪ್ರಯತ್ನ ಫಲಪ್ರದ | ಏಳು ವರ್ಷಗಳ ನಂತರ ಮತ್ತದೇ ಜಮೀನಿಗೆ ಸಹಾಯಧನ

ಎಲ್ಲ ವರ್ಗದ ರೈತರಿಗೂ ಸಿಗಲಿದೆ ಸೂಕ್ಷ್ಮ ನೀರಾವರಿ ಸಬ್ಸಿಡಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸೂಕ್ಷ್ಮ (ತುಂತುರು) ನೀರಾವರಿಗೆ ಸಹಾಯಧನದಡಿ ಪರಿಕರಗಳನ್ನು ಪಡೆಯಲಿದ್ದ ನಿರ್ಬಂಧವನ್ನು ಸರ್ಕಾರ ಸಡಿಲಿಸಿ, ಎಲ್ಲ ವರ್ಗದ ರೈತರಿಗೆ ಸಬ್ಸಿಡಿ ನವೀಕರಣ ಸೌಲಭ್ಯ ವಿಸ್ತರಿಸಿ ಆದೇಶಿಸಿದೆ.



ಪರಿಶಿಷ್ಟ ಜಾತಿ, ಪಂಗಡಗಳ ರೈತ ಫಲಾನುಭವಿಗಳು ಏಳು ವರ್ಷಗಳ ನಂತರ ಅದೇ ಜಮೀನಿಗೆ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿತ್ತು. ಇದೀಗ ಇತರ ವರ್ಗಗಳ ರೈತರಿಗೂ ಸರ್ಕಾರ ವಿಸ್ತರಿಸಿದೆ. ಈ ಹಿಂದೆ ಇತರೆ ವರ್ಗದ ರೈತರಿಗೆ ಒಮ್ಮೆ ಮಾತ್ರ ಒಂದು ನಿರ್ದಿಷ್ಟ ಜಮೀನಿಗೆ ಹನಿ ನೀರಾವರಿ, ತುಂತುರು ನೀರಾವರಿ ಘಟಕಗಳನ್ನು ಅವಕಾಶ ಕಲ್ಪಿಸಲಾಗಿತ್ತು.


ಸಚಿವರ ಪ್ರಯತ್ನ ಫಲಪ್ರದ: ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ರಾಜ್ಯ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಎಲ್ಲ ಜಿಲ್ಲೆಗಳ ರೈತರು ಇತರೆ ವರ್ಗಗಳ ರೈತರಿಗೆ ವಿಧಿಸಿರುವ ನಿರ್ಬಂಧ ಸಡಿಲಿಸಲು ಪದೇಪದೆ ವಿನಂತಿಸಿದ್ದರು. ಈ ಮನವಿಯನ್ನು ಎನ್. ಚಲುವರಾಯಸ್ವಾಮಿ ಗಂಭೀರವಾಗಿ ಪರಿಗಣಿಸಿದ್ದರು. ನಿರಂತರ ಪ್ರಯತ್ನ ಕೊನೆಗೂ ಫಲಪ್ರದವಾಗಿದೆ. ಇತರೆ ವರ್ಗಗಳ ರೈತರ ಮೇಲಿನ ನಿರ್ಬಂಧ ಸಡಿಲಿಸಿ, ಏಳು ವರ್ಷಗಳ ನಂತರ ಮತ್ತದೇ ಜಮೀನಿಗೆ ಸಬ್ಸಿಡಿ ನವೀಕರಣದ ಅವಕಾಶದ ಆದೇಶ ಹೊರಬಿದ್ದಿದೆ.

ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ಯೋಜನೆಯಡಿ ಒಂಭತ್ತು ಘಟಕಗಳನ್ನು ಸೇರ್ಪಡೆಗೊಳಿಸಿ ಪ್ರಧಾನಮಂತ್ರಿ ರಾಷ್ಟ್ರೀಯ ವಿಕಾಸ ಯೋಜನೆ (ಪಿಎಂ-ಆರ್‌ಕೆವಿವೈ) ಎಂದು ಮರು ನಾಮಕರಣ ಮಾಡಿದೆ. ಇದರ ವ್ಯಾಪ್ತಿಗೆ ಒಳಪಡಿಸುವಂತೆ ರೈತರಿಗೆ ಸೌಲಭ್ಯ ಪಡೆಯಲು ಅವಕಾಶ ನೀಡಿ ಆದೇಶಿಸಿದೆ.

2.60 ಲಕ್ಷ ರೈತರಿಗೆ ಅನುಕೂಲ: ಪಿಎಂಕೆಎಸ್‌ಐ ಮತ್ತು ಪಿಎಂಎಂಎಸ್ ಯೋಜನೆಯಡಿ ಸೂಕ್ಷ್ಮ ನೀರಾವರಿ ಯೋಜನೆಗೆ 274 ಕೋಟಿ ರೂ. ಮೀಸಲಿರಿಸಲಾಗಿತ್ತು. ಇದರಿಂದ 2.60 ಲಕ್ಷ ರೈತರಿಗೆ ಅನುಕೂಲ ತಲುಪಲಿದೆ. ಅಲ್ಲದೆ ಟಾಪ್‌ಅಪ್ ಯೋಜನೆಯಡಿ ಸೂಕ್ಷ್ಮ ನೀರಾವರಿ ಪರಿಕರಗಳಿಗೆ ಆರ್ಥಿಕ ನೆರವು ಒದಗಿಸಲು 252 ಕೋಟಿ ರೂ. ಅನುದಾನವನ್ನು ನೀಡಲಾಗಿದೆ. ಸುಸ್ಥಿರ ಕೃಷಿ ಅಭಿವೃದ್ಧಿ, ಯಾಂತ್ರೀಕರಣ ಮತ್ತು ಡಿಜಿಟಲೀಕರಣ, ಪ್ರತಿ ಹನಿ ನೀರು ಪರಿಣಾಮಕಾರಿ ಬಳಕೆ ಮುಂತಾದ ಉದ್ದೇಶಗಳನ್ನು ಪಿಎಂ-ಆರ್‌ಕೆವಿವೈ ಒಳಗೊಂಡಿದೆ.

ವಿಸ್ತೃತ ಯೋಜನಾ ವರದಿ, ಮಣ್ಣಿನ ಆರೋಗ್ಯ ನಿರ್ವಹಣೆ, ಮಳೆಯಾಶ್ರಿತ ಪ್ರದೇಶದ ಅಭಿವೃದ್ಧಿ, ಕೃಷಿ ಅರಣ್ಯ, ಪಾರಂಪರಿಕ ಕೃಷಿ, ಕೃಷಿ ಯಾಂತ್ರೀಕರಣ, ಪ್ರತಿ ಹನಿಗೂ ಹೆಚ್ಚಿನ ಬೆಳೆ, ಬೆಳೆ ಉಳಿಕೆ ನಿರ್ವಹಣೆ, ಬೆಳೆ ವೈವಿಧ್ಯೀಕರಣ, ಕೃಷಿ ನವೋದ್ಯಮಗಳಿಗೆ ವೇಗವರ್ಧಕ ನಿಧಿ ಘಟಕಗಳನ್ನು ಈ ಯೋಜನೆಯಡಿ ವಿಲೀನಗೊಳಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 60:40 ಅನುಪಾತದಡಿ ಯೋಜನಾ ವೆಚ್ಚವನ್ನು ಭರಿಸಲಿದೆ. ಸೂಕ್ಷ್ಮ ನೀರಾವರಿಗೆ ಪ್ರೋತ್ಸಾಹ ಸಲೆಂದು ರೈತರಿಗೆ ಸಬ್ಸಿಡಿ ಸೌಲಭ್ಯ ಕಲ್ಪಿಸಲಾಗಿದೆ. ಪಿಎಂ-ಆರ್‌ಕೆವಿವೈಯಡಿ 2023-24ನೇ ಸಾಲಿನಲ್ಲಿ ಕೇಂದ್ರ ಸರ್ಕಾರ 582.24 ಕೋಟಿ ರೂ. ಆರಂಭಿಕ ಹಂಚಿಕೆ ಮಾಡಿತ್ತು. ನಂತರ 761.89 ಕೋಟಿ ರೂ.ಗಳಿಗೆ ಏರಿಸಿದ್ದು, ಹೆಚ್ಚುವರಿ ಮೊತ್ತದ ಪೈಕಿ ಕೃಷಿ ಯಾಂತ್ರೀಕರಣ ಮತ್ತು ಉಳಿಕೆ ಬೆಳೆ ನಿರ್ವಹಣೆಗೆ 120 ಕೋಟಿ ರೂ., ಮಣ್ಣಿನ ಆರೋಗ್ಯ-12 ಕೋಟಿ ರೂ., ವಿಸ್ತೃತ ಯೋಜನಾ ವರದಿ ಘಟಕಕ್ಕೆ 46.65 ಕೋಟಿ ರೂ. ಸೇರಿತ್ತು. ಯೋಜನೆಯಡಿ 526.75 ಕೋಟಿ ರೂ., 2024-25ನೇ ವರ್ಷಕ್ಕೆ ಹಂಚಿಕೆಯಾದ ಮೊತ್ತದಲ್ಲಿ 326.02 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.

ಸೂಕ್ಷ್ಮ ನೀರಾವರಿಗೆ ಸಬ್ಸಿಡಿ ಸೌಲಭ್ಯವೆಷ್ಟು?



ಹೆಕ್ಟೇರ್	0.4
ಗಾತ್ರ	63 ಎಂಎಂ
ಒಟ್ಟು ವೆಚ್ಚ	14,386 ರೂ.
ರೈತರ ಪಾಲು	2496
ಸರ್ಕಾರದ ಪಾಲು	11,890
ಹೆಕ್ಟೇರ್	ಒಂದು
ಗಾತ್ರ	63 ಎಂಎಂ
ಒಟ್ಟು ವೆಚ್ಚ	23,568 ರೂ.
ರೈತರ ಪಾಲು	4139
ಸರ್ಕಾರದ ಪಾಲು	19,429

ಹೆಕ್ಟೇರ್	ಒಂದು
ಗಾತ್ರ	75ಎಂಎಂ
ಒಟ್ಟು ವೆಚ್ಚ	26,442 ರೂ
ರೈತರ ಪಾಲು	4667
ಸರ್ಕಾರದ ಪಾಲು	21,775
ಹೆಕ್ಟೇರ್	ಎರಡು
ಗಾತ್ರ	63ಎಂಎಂ
ಒಟ್ಟು ವೆಚ್ಚ	33,822 ರೂ
ರೈತರ ಪಾಲು	5772
ಸರ್ಕಾರದ ಪಾಲು	28,050
ಹೆಕ್ಟೇರ್	ಎರಡು
ಗಾತ್ರ	75ಎಂಎಂ
ಒಟ್ಟು ವೆಚ್ಚ	37732 ರೂ.
ರೈತರ ಪಾಲು	6541
ಸರ್ಕಾರದ ಪಾಲು	31191

GI tag for Warangal chilli spices up export prospects

S N V SUDHIR
HYDERABAD, DHNS

The Warangal Chapata Chilli, a unique variety grown in central Telangana's agro-climatic zone, has received a Geographical Indication (GI) tag. Locally known as "tomato chilli" for its blocky, tomato-like shape, this variety is renowned for its distinct features and natural red colouring properties.

Grown across 6,700 acres in the districts of Warangal, Hanumakonda, Mulugu and Bhupalapalli, the region produces around 10,950 metric tonnes annually. According to Danda Raji Reddy, Vice Chancellor of Sri Konda Laxman Telangana Horticultural University, the GI recognition will benefit over 20,500 farmers.



Warangal Chapata Chilli is known for its red colouring properties.

The chilli is available in three fruit variations: single patti, double patti and odalu. Historical records suggest that its cultivation began around 80 years ago in Nagaram village of Jammikunta Mandal, with Nadikuda village possibly being its oldest source.

This marks Telangana's 18th GI registration.

Subhajit Saha, GI practitioner and founder of Resolute4IP, who facilitated legal compliance, believes that farmers can now raise their market price from Rs 300 per kg to Rs 450-500. He highlighted the importance of packaging and branding for effective marketing, with plans to focus on 'Authorised Users' registration to ensure all producers benefit.

The GI application was jointly submitted by Thimmampet Chilly Farmer Producer Company Limited and Janna Reddy Venkat Reddy Horticultural Research Station, Malyal, under Sri Konda Laxman Telangana Horticultural University. Rajkumar Reddy, president of the farmer producer company, hoped that the GI tag would "add more colour to the lives of chilli farmers" with better export prospects.

The chilli stands out for its exceptional moisture retention, low brittleness, vibrant red colour and minimal pungency.

Dec Hrd pg 02

V-karnataka pg 02

ಹನಿ ನೀರಾವರಿ, ನಿರ್ಬಂಧ ತೆರವು

ಬೆಂಗಳೂರು: ಸೂಕ್ಷ್ಮ ನೀರಾವರಿ ಪರಿಕರಗಳನ್ನು ಒಬ್ಬರೇ ರೈತರು ಮತ್ತೊಮ್ಮೆ ಪಡೆಯಲು ವಿಧಿಸಲಾಗಿದ್ದ ನಿರ್ಬಂಧವನ್ನು ಸರಕಾರ ಸಡಿಲಿಸಿದ್ದು, ಎಲ್ಲ ವರ್ಗದ ರೈತ ಫಲಾನುಭವಿಗಳು 7 ವರ್ಷಗಳ ನಂತರ ಅದೇ ಜಮೀನಿಗೆ ಮರು ಸಹಾಯಧನ ಪಡೆಯಲು ಅವಕಾಶ ಕಲ್ಪಿಸಿ ಸರಕಾರ ಆದೇಶ ಹೊರಡಿಸಿದೆ. ಈ ಹಿಂದೆ ಪರಿಶಿಷ್ಟ ಜಾತಿ, ಪಂಗಡದ ರೈತ ಫಲಾನುಭವಿಗಳನ್ನು ಹೊರತುಪಡಿಸಿ ಇತರೆ ವರ್ಗದವರಿಗೆ ಒಂದು ಬಾರಿ ಮಾತ್ರ ಒಂದು ನಿರ್ದಿಷ್ಟ ಜಮೀನಿಗೆ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಪರಿಕರಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿತ್ತು. ಈಗ ಇದನ್ನು ತೆಗೆದು ಹಾಕಿ ಆದೇಶ ಹೊರಡಿಸಲಾಗಿದೆ. ರಾಜ್ಯ ಪ್ರವಾಸದ ಸಂದರ್ಭಗಳಲ್ಲಿ ಬಂದ ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ನಿಯಮ ಸಡಿಲಿಸಿದ್ದಾರೆ.

Dec Hrd pg 04

भाकृअनुप - राष्ट्रीय पशु पोषण एवं शरीर क्रिया विज्ञान संस्थान
आडुगोडी, बेंगलूरु - 560 030
कृषि अनुसंधान एवं शिक्षा विभाग, भारत सरकार
ICAR - National Institute of Animal Nutrition and Physiology
Adugodi, Bengaluru - 560 030
Department of Agricultural Research and Education, Government of India

NIANP/ADV-05-CDN/2024-25


The walk - in - interview has been scheduled on 21.04.2025, 10.30 AM for engaging of One Young Professional I under AICRP (NPIERPA) project on temporary basis. The consolidated remuneration is Rs. 30,000/- per month. For detailed advertisement please visit the Institute website www.nianp.res.in.

Sd/-
Sr. Administrative Officer

ಎನ್‌ಆರ್‌ಐಗೆ 'ಪ್ರಜಾವಾಣಿ' ವಿಡಿಯೊ ವರದಿ ಪ್ರೇರಣೆ

ಬಳ್ಳಿ ಆಲೂಗಡ್ಡೆ ಹುಡುಕಿ ಬಂದ ವಿಜ್ಞಾನಿ

ಪ್ರಜಾವಾಣಿ ವಾರ್ತೆ



ಶಿಡ್ಲಘಟ್ಟ ತಾಲ್ಲೂಕಿನ ಅಪ್ಪೇಗೌಡನಹಳ್ಳಿ ರೈತ ಎ.ಎಂ.ತ್ಯಾಗರಾಜ್ ಬೆಳೆದಿರುವ ಬಳ್ಳಿ ಆಲೂಗಡ್ಡೆಯನ್ನು ತೆಗೆದುಕೊಂಡು ಹೋದ ಅನಿವಾಸಿ ಭಾರತೀಯ ರಾಘವರೆಡ್ಡಿ

ಶಿಡ್ಲಘಟ್ಟ: ನಾಲ್ಕು ವರ್ಷಗಳಿಂದ ಬಳ್ಳಿ ಆಲೂಗಡ್ಡೆ ಬೆಳೆಯುತ್ತಿರುವ ತಾಲ್ಲೂಕಿನ ಅಪ್ಪೇಗೌಡನಹಳ್ಳಿ ರೈತ ಎ.ಎಂ. ತ್ಯಾಗರಾಜ್ ಅವರನ್ನು ಹುಡುಕಿಕೊಂಡು ಅಮೆರಿಕದಲ್ಲಿ ನೆಲಸಿರುವ ಕೃಷಿ ವಿಜ್ಞಾನಿ ರಾಘವರೆಡ್ಡಿ ಗ್ರಾಮಕ್ಕೆ ಬಂದಿದ್ದಾರೆ.

ತ್ಯಾಗರಾಜ್ ಬೆಳೆದ ಬಳ್ಳಿ ಆಲೂಗಡ್ಡೆ ಕುರಿತು 'ಪ್ರಜಾವಾಣಿ' ವರದಿ ಪ್ರಕಟಿಸುವ ಜೊತೆಗೆ ವಿಡಿಯೊ ವರದಿ ಕೂಡ ಮಾಡಿತ್ತು. (https://www.youtube.com/watch?v=sKJZt3Sm-5w) ವಿಡಿಯೊ ನೋಡಿದ ರಾಘವರೆಡ್ಡಿ ಅವರು ತ್ಯಾಗರಾಜ್ ಅವರ ತೋಟಕ್ಕೆ ಭೇಟಿ ನೀಡಿದ್ದರು.

'ಬಳ್ಳಿ ಆಲೂಗಡ್ಡೆಯಲ್ಲಿ ಸಾಕಷ್ಟು ಔಷಧೀಯ ಗುಣಗಳಿವೆ. ಇದನ್ನು ಔಷಧೀಯ ಕಣಜ ಎಂದು ಆದಿವಾಸಿಗಳು ಬಳಸುತ್ತಿದ್ದರು. ತ್ಯಾಗರಾಜ್ ಬೆಳೆದಿರುವ ಬಳ್ಳಿ ಆಲೂಗಡ್ಡೆ ಬಗ್ಗೆ ವಿಡಿಯೊ ಕೃಷಿ ವಿಜ್ಞಾನಿಯಾದ ನನ್ನ ಗಮನವನ್ನು ಸಹಜವಾಗಿ ನೋಡಿದ ನಂತರ ಇಲ್ಲಿಗೆ ಹಿಂದಿರುಗಿದಾಗ ಅವರ ತೋಟಕ್ಕೆ ಭೇಟಿ ನೀಡಬೇಕು ಎಂದು ವಿಳಾಸ ಬರೆದಿಟ್ಟು ಕೊಂಡಿದ್ದೆ. ತೋಟದಲ್ಲಿ ಬೆಳೆದ ಆಲೂಗಡ್ಡೆಗಳನ್ನು ತೆಗೆದುಕೊಂಡು ಹೋಗುತ್ತಿರುವೆ' ಎಂದು ರಾಘವರೆಡ್ಡಿ ತಿಳಿಸಿದರು.

'ಬೆಂಗಳೂರಿನ ಜಿಕೆವಿಕೆಯಲ್ಲಿ ಕೃಷಿ ವಿಜ್ಞಾನದಲ್ಲಿ ಎಂ.ಎಸ್ಸಿ ಪದವಿ ಪಡೆದ ನಂತರ ಉದ್ಯೋಗ ನಿಮಿತ್ತ 45 ವರ್ಷಗಳಿಂದ ಅಮೆರಿಕದ ಸಿಯಾಟೆಲ್‌ನಲ್ಲಿ ನೆಲಸಿರುವೆ. ಈಗ ಹೊಸಕೋಟೆ ಬಳಿ ದೇವನಗುಂದಿ ಹೊಸಹಳ್ಳಿಯಲ್ಲಿ ಜಮೀನು ಖರೀದಿಸಿ ಬರ ಸಹಿಷ್ಣು ಹಣ್ಣಿನ ಮರ ಮತ್ತು ಸಸ್ಯಗಳನ್ನು ಬೆಳೆಸುತ್ತಿದ್ದೇನೆ. ಮೂರು ವರ್ಷ ಆರೈಕೆ ಮಾಡಿದರೆ ಹಣ್ಣಿನ ಮರಗಳ ಅರಣ್ಯವನ್ನು ರೂಪಿಸುವ ಉದ್ದೇಶ ಹೊಂದಿದ್ದೇನೆ. ಬಳ್ಳಿ ಆಲೂಗಡ್ಡೆ ಕೂಡ ಈ ಅರಣ್ಯಕ್ಕೆ ಹೊಸ ಸೇರ್ಪಡೆಯಾಗಲಿದೆ. ಅಮೆರಿಕಕ್ಕೂ ಒಂದೆರಡು ಆಲೂಗಡ್ಡೆ ತೆಗೆದುಕೊಂಡು ಹೋಗುವೆ. ವರ್ಷಕ್ಕೊಮ್ಮೆ ಭಾರತಕ್ಕೆ ಬರುತ್ತಿರುತ್ತೇನೆ. ನಾನಿಲ್ಲದಿದ್ದಾಗ ಜಮೀನನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಕ ಮಾಡಿರುವೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

Prajavani pg 5B

Dairy of an agro phile: How now, holy cow?

Chidanand Rajghatta | TNN



Reuters

In a 400-page report on foreign trade barriers that Trump waved around, there was a 16-page critique on India's practices

Washington: US President Trump unveiled a laundry list of his administration's grievances about "Tariff King" New Delhi's "trade barriers," but few gripes were more tone deaf than ones against India's agriculture and dairy sector, the life blood of rural India that employs nearly 50% of the country's workforce.

In a 400-page report on foreign trade barriers that Trump waved around while announcing punitive global tariffs, there was a 16-page critique on India's practices, including "onerous requirements" that Delhi imposes on dairy imports.

"India requires that dairy products intended for food be derived from animals that have not consumed feeds containing internal organs, blood meal, or tissues of ruminant or porcine origin and that exporting countries certify to these conditions," the report complained, maintaining that the conditions "lack a discernable (sic) animal health or human health justification."

There was no mention of religious or cultural norms.

The irony is that many American practices in the food and agro sector is being scrapped or reversed by Trump's own health and human services (HHS) chief Robert F Kennedy as part of his "Make America Healthy Again" (MAHA) agenda, from his beef against beef tallow to banning synthetic food dyes. Although the USDA (US dept of agriculture) and not HHS is the primarily agency to regulate animal feed and dairy farming practices, the US dairy industry is bracing for scrutiny of feed additives like antibiotics, synthetic hormones, bloodmeal and bonemeal used in ruminant diets to boost milk production.

Europe continues to restrict US dairy on similar grounds, including the use of recombinant bovine somatotropin (rBST), a synthetic hormone injected into cows to increase milk production. Yet the tariff tome complains that New Delhi continues to hamper market access for US milk and dairy product exports to India, describing it as "one of the largest dairy markets in the world," that Washington still intends to break into. Evidently, the farm constituency in MAGAland is important enough electorally to not practise what is preached.

Similar gripes litter the critique, including India's high tariffs on alcoholic beverages (150%, but since reduced). Irony alert: Both Trump and Kennedy, who once battled addiction, are teetotalers.

Times of Ind Pg 14

S-karnataka pg 01

165 ರೈತರಿಗೆ 10 ಕೋಟಿ ಪಂಗನಾಮ!

ಅನ್‌ಫಿಕ್ಸ್ ದರದಲ್ಲಿ ಕಡಲೆ ಖರೀದಿಸಿ ಕೈ ಎತ್ತಿದ ಬೀಜ ಕಂಪನಿ

■ ಸೂರ್ಯನಾರಾಯಣ ನರಗುಂದಕರ

ಗದಗ: ರೈತರಿಗೆ ಅನ್‌ಫಿಕ್ಸ್ ದರದ ಹೆಸರಿನಲ್ಲಿ ಹೆಚ್ಚಿನ ಬೆಲೆ ನೀಡುವುದಾಗಿ ನಂಬಿಸಿದ ಸೀಡ್ಸ್ ಕಂಪನಿಯೊಂದು ಗದಗ, ಕೊಪ್ಪಳ ಜಿಲ್ಲೆಯ 165 ಜನರಿಂದ ಕಡಲೆ ಖರೀದಿಸಿ ಸುಮಾರು ಹತ್ತು ಕೋಟಿ ರೂಪಾಯಿ ಪಂಗನಾಮ ಹಾಕಿದ ಪ್ರಕರಣ ಬೆಳಕಿಗೆ ಬಂದಿದೆ.

ಕಳೆದ ಎರಡು ವರ್ಷಗಳಿಂದ ರೈತರಿಗೆ ಹಣ ನೀಡಲು ಈ ಸೀಡ್ಸ್ ಕಂಪನಿ ಸತಾಯಿಸುತ್ತಿದೆ. ರೈತರು ಪ್ರತಿನಿತ್ಯ ಸೀಡ್ಸ್ ಕಂಪನಿಗೆ ಅಲೆದಾಡಿ ಸುಸ್ತಾಗಿದ್ದಾರೆ. ಈ ಮಧ್ಯೆ ಸೀಡ್ಸ್ ಕಂಪನಿಯ ಪಾಲುದಾರನೋರ್ವ ರೈತರಿಗೆ ನೀಡಬೇಕಾದ ಬಾಕಿ ವಿವರ ಗಳ ಡೆತ್‌ನೋಟ್ ಬರೆದಿಟ್ಟು ಆತ್ಮ ಹತ್ಯೆ ಮಾಡಿಕೊಂಡಿದ್ದಾನೆ. ಇನ್ನೋರ್ವ ಪಾಲುದಾರ ತನಗೂ ಇದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ವೆಂದು ಕೈತೊಳೆದುಕೊಂಡಿದ್ದಾನೆ.



ಏನಿದು ಪ್ರಕರಣ?: ಗದಗ ಮೂಲದ ಕೃಷಿಕ ಹೈಟೆಕ್ ಸೀಡ್ಸ್ ಕಂಪನಿ ಎರಡು ವರ್ಷಗಳ ಹಿಂದೆ ಗದಗ, ಕೊಪ್ಪಳ ಜಿಲ್ಲೆಯ ಸುಮಾರು 165 ರೈತರಿಂದ ಸುಮಾರು 65 ಸಾವಿರ ಕ್ವಿಂಟಾಲ್‌ಗೂ ಹೆಚ್ಚು ಕಡಲೆ ಖರೀದಿಸಿತ್ತು. ಮಾರುಕಟ್ಟೆಯಲ್ಲಿ ಕಡಲೆ ಬೆಲೆ ಕುಸಿತಗೊಂಡಿದ್ದರಿಂದ ರೈತರಿಗೆ ಕಡಲೆ ಸಾಗಾಟ, ಹಮಾಲಿ ವೆಚ್ಚಕ್ಕಾಗಿ ಮಾತ್ರ ಹಣ ನೀಡಿತ್ತು. ಉಳಿದ ಹಣವನ್ನು ಮಾರುಕಟ್ಟೆಯಲ್ಲಿ ದರ ಬಂದ ನಂತರ ಅನ್‌ಫಿಕ್ಸ್ ಪದ್ಧತಿಯಂತೆ ನೀಡುವ ಕರಾರು ಮಾಡಿಕೊಳ್ಳಲಾಗಿತ್ತು. 2023ರ ಜನವರಿಯಲ್ಲಿ ಬೆಲೆ ಬಂದಾಗ ರೈತರು ಸೀಡ್ಸ್ ಕಂಪನಿಗೆ ಹೋಗಿ ಹಣ ನೀಡುವಂತೆ ಕೇಳಿದಾಗ ಹಣ ನೀಡದೇ ಸಾಗಹಾಕಿದ್ದಾನೆ. ಕಂಪ ನಿಯ ಪಾಲುದಾರ ಚಂದ್ರಶೇಖರ ಅರಹುಣಸಿ ಪಾಲುದಾರಿಕೆಯಲ್ಲಿನ ತೊಂದರೆಯಿಂದಾಗಿ ಸೆಪ್ಟೆಂಬರ್ 2023 ರಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಪುಟ-9

ಅನ್‌ಫಿಕ್ಸ್ ಎಂದರೇನು?

ಮಾರುಕಟ್ಟೆಯಲ್ಲಿ ದರ ಕುಸಿತಗೊಂಡ ಸಂದರ್ಭದಲ್ಲಿ ಸೀಡ್ಸ್ ಕಂಪನಿಗಳು, ದಲಾಲಿ ವರ್ತಕರು ರೈತರಿಂದ ಖರೀದಿಸಿದ ಕೃಷಿ ಹುಟ್ಟುವಳಿಗಳಿಗೆ ತಕ್ಷಣಕ್ಕೆ ಹಣ ನೀಡುವದಿಲ್ಲ. ಮಾರುಕಟ್ಟೆಯಲ್ಲಿ ಕೃಷಿ ಹುಟ್ಟುವಳಿಗಳಿಗೆ ಉತ್ತಮ ದರ ಬಂದಾಗ, ಇಲ್ಲವೇ ರೈತರು ಕೇಳಿದಾಗ ಅಂದಿನ ಮಾರುಕಟ್ಟೆ ದರದಂತೆ ಹಣ ನೀಡುವದೇ ಅನ್‌ಫಿಕ್ಸ್ ವ್ಯವಹಾರ ಪದ್ಧತಿ.

ಫೆ. 23ರಿಂದ ಅನಿರ್ದಿಷ್ಟ ಧರಣಿ

ರೈತರಿಗೆ ನೀಡಬೇಕಾದ ಹಣವನ್ನು ಕೂಡಲೇ ಕೊಡಬೇಕು. ಇಲ್ಲದಿದ್ದಲ್ಲಿ ಫೆ. 23ರಿಂದ ಸೀಡ್ಸ್ ಕಂಪನಿ ಪಾಲುದಾರರ ಮನೆ ಮುಂದೆ ಅನಿರ್ದಿಷ್ಟ ಧರಣಿ ನಡೆಸಲಾಗುವುದು.

■ ವಸಂತ ಮೇಟಿ, ರೈತ ಧುರೀಣ

165 ರೈತರಿಗೆ ಪಂಗನಾಮ

ಮೊದಲ ಪುಟದಿಂದ..

ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ ಡೆತ್‌ನೋಟ್‌ನಲ್ಲಿ ಚಂದ್ರಶೇಖರ ಅರಹುಣಸಿ ರೈತರಿಗೆ ನೀಡಬೇಕಾಗಿರುವ ಹಣದ ವಿವರಗಳು, ತನ್ನ ಆಸ್ತಿ ವಿವರಗಳನ್ನು ದಾಖಲಿಸಿದ್ದಾನೆ. ತನ್ನ ಹೆಸರಿನಲ್ಲಿರುವ ಕೆಲ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ರೈತರ ಬಾಕಿ ತೀರಿಸುವಂತೆ ಆತ ತನ್ನ ಪಷಚಿತ್ನಿ ಹೆಸರಿನಲ್ಲಿ ಬರೆದ ಡೆತ್‌ನೋಟ್‌ನಲ್ಲಿ ತಿಳಿಸಿದ್ದಾನೆ.

ನಂತರ ರೈತರ ಬಾಕಿ ನೀಡಲು ಇನ್ನೋರ್ವ ಪಾಲುದಾರ ಅರವಿಂದರೆಡ್ಡಿ ಬಸವರೆಡ್ಡಿ ಹುಚ್ಚಣ್ಣವರ ನಿರಾಕರಿಸಿ ತನಗೂ ಇದಕ್ಕೂ ಸಂಬಂಧವಿಲ್ಲವೆಂದು ಜಾರಿಕೊಂಡಿದ್ದಾನೆಂದು ರೈತರು ದೂರಿದ್ದಾರೆ.

ಸಕಾಲಕ್ಕೆ ಹಣ ಬಾರದ್ದರಿಂದ ನಾಲ್ಕು ರೈತರು ಸಾವನ್ನಪ್ಪಿದ್ದಾರೆ. ಹಿರಿಯರ ಮಧ್ಯಸ್ಥಿಕೆಯಲ್ಲಿ ಜರುಗಿದ ಸಂಧಾನ ಸಭೆಯಲ್ಲಿ ಅರವಿಂದರೆಡ್ಡಿ ಹುಚ್ಚಣ್ಣವರ, ಪಾಲುದಾರನ ಪತ್ನಿ ಅಪೇಕ್ಷಾ ಅರಹುಣಸಿ ರೈತರಿಗೆ ನೀಡಬೇಕಾಗಿರುವ ಹಣದ ಅರ್ಧ ಪಾಲನ್ನು ನೀಡುವದಾಗಿ ಒಪ್ಪಿಕೊಂಡಿದ್ದರು. ಇದೀಗ ಅಪೇಕ್ಷಾ ಅರಹುಣಸಿ ತನ್ನ ಮಾವನಿಂದ ಬರಬೇಕಾದ ಆಸ್ತಿಯ ಪಾಲು ಬಂದ ನಂತರವೇ ಹಣ ನೀಡುವುದಾಗಿ ಹೇಳುತ್ತಿದ್ದಾರೆ ಎಂದು ರೈತರು ದೂರಿದ್ದಾರೆ. ಚಂದ್ರಶೇಖರ ಅರಹುಣಸಿ ಡೆತ್‌ನೋಟ್‌ನಲ್ಲಿ ಬರೆದಿರುವಂತೆ ರೈತರಿಗೆ ಹಣ ಪಾವತಿಸುವಂತೆ ಆಗ್ರಹಿಸಿ ನೂರಾರು ರೈತರು ಇಂದು ಧರಣಿ ನಡೆಸಿದರು.

ಮಾವಿನಹಣ್ಣೆಂಬ ರಸಋಷಿ



ಯುಗಾದಿ ಹಬ್ಬ ಮುಗಿಯುತ್ತಲೇ ಮಾವಿನಹಣ್ಣು ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳತೊಡಗಿದೆ. ಮಲೆನಾಡಿಗರು ಹೊಳೆ ಬದಿಯ ಅಪ್ಪೆಮಿಡಿ- ಹುಡುಕಿ ಉಪ್ಪಿನಕಾಯಿಗೆ ಇಂಗು- ಮೆಣಸು- ಉಪ್ಪು ತಯಾರಿ ಮಾಡಿಟ್ಟುಕೊಳ್ಳುತ್ತಿದ್ದಾರೆ. ಮಾವಿನಕಾಯಿ ಗೊಜ್ಜು ಚಿತ್ರಾನ್ನ, ಪಾನಕ, ಅಪ್ಪೆಮಿಡಿ ಸಾರು, ಮಾವಿನಹಣ್ಣಿನ ರಸಾಯನಗಳು ಮನೆಮನೆಯಲ್ಲಿ ಕಾಣಿಸಿಕೊಳ್ಳಲಿವೆ. 'ಹಾಪುಸ್' ಒಳ್ಳೆಯದೋ, 'ಬಂಗನಪಲ್ಲಿ' ರುಚಿಕರವೋ ಅಂತ ಬೆಂಗಳೂರಿಗರು ಹುಸಿಜಗಳ ಶುರು ಮಾಡುತ್ತಾರೆ.

''ನಮ್ಮ ಪ್ರಧಾನಿ ಮಾವಿನಹಣ್ಣು ತಿನ್ತಾರಾ? ತಿನ್ನೋದಾದರೆ ಹೇಗೆ ತಿನ್ತಾರೆ? ಚಿಕ್ಕ-ಚಿಕ್ಕ ಹೋಳು ಮಾಡಿ ತಿನ್ತಾರಾ ಇಲ್ಲಾ ಸಿಂಕ್ ಬಳಿ ನಿಂತು ಸುರಿಸಿಕೊಳ್ಳುತ್ತಾ ತಿನ್ತಾರಾ?,'' ಎಂದು ಬಾಲಿವುಡ್ ನಟ ಅಕ್ಷಯ್ ಕುಮಾರ್, ಪ್ರಧಾನಿ ನರೇಂದ್ರ ಮೋದಿಯವರನ್ನು ಕೇಳಿದ್ದು ನಿಮಗೆ ನೆನಪಿದ್ದೀತು. ಚುನಾವಣೆಗೆ ಕೆಲದಿನ ಮುಂಚೆ ನಡೆದ ಈ ಸಂದರ್ಶನ ರಾಜಕೀಯ ಕೋಲಾಹಲ ಎಬ್ಬಿಸಿತ್ತು. ಇಂಥ ರಾಜಕೀಯೇತರ ಮಾತುಕತೆಯು ನಿಜವಾದ ವಿಷಯಗಳಿಂದ ಗಮನ ಬೇರೆಡೆಗೆ ಸೆಳೆಯುವ ಯತ್ನ ಎಂದು ಕೆಲವರು ಟೀಕಿಸಿದರೆ, ಇನ್ನೂ ಕೆಲವರಿಗೆ ಇದು ನಾಯಕನ ಮಾನವೀಯ ಮುಖವನ್ನು ತೋರಿಸುವ ಕ್ಷಣವಾಗಿ ಕಂಡಿತ್ತು.

ಆದರೆ, ಮೊದಲ ಬಾರಿಗೆ ಮಾವು ತಿನ್ನಲು ಯತ್ನಿಸುವವರಿಗೆ ಈ ಪ್ರಶ್ನೆ ತಮಾಷೆಯಾಗಿ ಕಾಣಿಸಲಿಕ್ಕಿಲ್ಲ. ಮಾವಿನ ಸವಿಯ ಸುಖ ಬೇಕಾದರೆ ಇಡೀ ಹಣ್ಣನ್ನು ಒಬ್ಬರೇ ತಿನ್ನಬೇಕು, ಮೈಕೈ ತುಂಬ ಸುರಿಸಿಕೊಳ್ಳಬೇಕು. ಅದನ್ನು ಸೇಬಿನ ಹಾಗೆ ಹೆಚ್ಚಿ ಹೋಳಾಗಿಸಿ ತಿನ್ನುವಲ್ಲಿ ಮಜವಿಲ್ಲ, ಸಿಪ್ಪೆ ಸುಲಿದು ಚಪ್ಪರಿಸಿ ನೆಕ್ಕುತ್ತ ರಸ ಹೀರಿ, ಕೊನೆಗೆ ಗೊರಟಿಗಂಟಿದ ಕೊನೆಹಣಿಯನ್ನೂ ಸೊರಸೊರ ಸದ್ದು ಮಾಡುತ್ತ ಹೀರಿಬಿಡಬೇಕು. ಆಗಲೇ ಮನಸ್ಸಿಗೆ ತೃಪ್ತಿ. ಕಾಟು ಮಾವು ತಿಂದು ಬೆಳೆದವರಿಗಂತೂ ನೀಟಾಗಿ ಪ್ಲೇಟಿನ ಮೇಲೆ ಕತ್ತರಿಸಿಟ್ಟ ಮಾವಿನ ಹೋಳುಗಳು ಕಳೇಬರದಂತೆ ಕಾಣುತ್ತವೆ. ಕವಿ ಮಹಾಲಿಂಗರಂಗನೂ 'ಕನ್ನಡವನ್ನು ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ' ಎಂದನೇ ಹೊರತು 'ಸಿಪ್ಪೆ ತೆಗೆದ ಮಾವಿನ ಹೋಳಿನಂದದಿ' ಎನ್ನಲಿಲ್ಲ!

ಅದಕ್ಕೇ ಭಾರತದ ಮೊದಲ ಪ್ರಧಾನಿ ನೆಹರು, ವಿದೇಶಿ ಅತಿಥಿಗಳಿಗೆ ಮಾವಿನಹಣ್ಣನ್ನು ಪರಿಚಯಿಸುವಾಗ, ಅವುಗಳನ್ನು ತಿನ್ನುವ ಸರಿಯಾದ ರೀತಿಯನ್ನೂ ತೋರಿಸುತ್ತಿದ್ದರಂತೆ. ಮಾವಿನ ಮೃದುತನ, ನಾರಿನ ಪ್ರಮಾಣದ ಆಧಾರದ ಮೇಲೆ ಕೆಲವನ್ನು ಹೆಚ್ಚಿ ಹೋಳು ಮಾಡಿ ತಿನ್ನುವುದು ಒಳ್ಳೆಯದು, ಇನ್ನು ಕೆಲವನ್ನು ಮೊದಲು ಒತ್ತಿ ರಸ ಹಿಂಡಿ, ಸಿಪ್ಪೆಯಲ್ಲಿ ತೂತು ಮಾಡಿ, ಸರ್ರನೆ ಹೀರಿಕೊಂಡು ಸವಿಯಬೇಕು ಎಂದು ಸ್ವತಃ ತಿನ್ನುತ್ತಾ ವಿವರಿಸುತ್ತಿದ್ದರಂತೆ. ದೇಶವಿದೇಶದ ಅತಿಥಿಗಳಿಗೆ ಹೂಗುಚ್ಛದ ಜತೆಗೆ ಬುಟ್ಟಿ ಮಾವಿನಹಣ್ಣನ್ನು ಉಡುಗೊರೆಯಾಗಿ ಕೊಡುತ್ತಿದ್ದರು. ಈ ಸಂಪ್ರದಾಯ ಈಗಲೂ ಮುಂದುವರಿದಿದೆ.

ಮೊಘಲ್ ದೊರೆ ಬಾಬರ್ ಕೂಡ, ಮಾವನ್ನು 'ಹಿಂದೂಸ್ತಾನದ ಅತ್ಯುತ್ತಮ ಹಣ್ಣು' ಅಂತ ಘೋಷಿಸಿ, ಅದನ್ನು ಎರಡು ರೀತಿಯಲ್ಲಿ ತಿನ್ನಬಹುದು ಎನ್ನುತ್ತಾನೆ. ''ಕೆಲವನ್ನು ಹಿಂಡಿ ಗುದ್ದಿ ತೂತು ಮಾಡಿ ಸರ್ರನೆ ರಸ ಕುಡಿಯಬೇಕು, ಇನ್ನು ಕೆಲವನ್ನು, ಸಿಪ್ಪೆ ತೆಗೆದು ಹೆಚ್ಚಿ ಕತ್ತರಿಸಿ ತಿನ್ನಬೇಕು,'' ಎಂದು ತನ್ನ ಆತ್ಮಚರಿತ್ರೆಯಲ್ಲಿ ದಾಖಲಿಸಿದ್ದಾನೆ. 'ಚೂಸಿ ಆಮ್' ಅಂತ ಕರೆಯಲ್ಪಡುವ ಉತ್ತರ ಭಾರತೀಯ ಮಾವಿನ ತಳಿಗಳೂ ಇವೆ. ಇವನ್ನು ತಿನ್ನುವಾಗ ಮೈಮೇಲೆ ಸುರಿಸಿಕೊಳ್ಳದೆ ಇರಲು ಸಾಧ್ಯವೇ ಇಲ್ಲ.

16ನೇ ಶತಮಾನದಲ್ಲಿ ಗೋವಾದಲ್ಲಿದ್ದ ಪೋರ್ಚುಗೀಸ್ ವೈದ್ಯ ಗಾರ್ಸಿಯಾ ಡಿ ಒರ್ಟಾ, ''ಹರಿತವಾದ ಚಾಕು ಬಳಸಿ, ಮಾವಿನ ಹೋಳಿಗೆ ನೋವಾಗದ ಹಾಗೆ ಕತ್ತರಿಸಬೇಕು. ಅವುಗಳನ್ನು ಸಿಹಿ ಪರಿಮಳದ ವೈನ್‌ನಲ್ಲಿ ನೆನೆಸಿ ತಿಂದರೆ ಸುಖವೇ ಬೇರೆ,'' ಎನ್ನುತ್ತಾನೆ. ಇದಲ್ಲದೆ, ''ಸಕ್ಕರೆ, ವಿನೆಗರ್, ಎಣ್ಣೆ-ಉಪ್ಪು ಜತೆಗೆ, ಇಲ್ಲಾ ಹಸಿ ಶುಂಠಿ-ಬೆಳ್ಳುಳ್ಳಿ ತುಂಬಿ, ಉಪ್ಪು ಬೆರೆಸಿ, ಬೇಯಿಸಿ ಬಗೆಬಗೆಯಲ್ಲಿ ತಿನ್ನಿ,'' ಎಂದು ಉಚಿತ ಸಲಹೆ ಕೊಡುತ್ತಾನೆ. ಆದರೆ, ತನ್ನ ಈ ರೀತಿಗಳು ರಾಜ ದರ್ಬಾರಿಗೆ ಸೂಕ್ತವಲ್ಲ ಎಂದು ಒಪ್ಪಿಕೊಂಡು, ''ನಾನಿಲ್ಲಿ ಹೇಳೋದನ್ನೆಲ್ಲ ಬರೆದಿಡಬೇಡಿ, ನನ್ನನ್ನು ಜನ ಇಂಥ ತುಂಟಾಟದಲ್ಲಿ ತೊಡಗಿದವ ಅಂತ ಹಗುರವಾಗಿ ಭಾವಿಸಬಾರದು,'' ಎಂದು ಎಚ್ಚರಿಸುತ್ತಾನೆ. ''ಭಾರತದ ಮಾವಿನ ಹಣ್ಣಿನ ರುಚಿ ಯುರೋಪಿನ ಯಾವ ಹಣ್ಣಿಗೂ ಸಮವಲ್ಲ, ಈ ಅವಮಾನಕರ ಕಟು ಸತ್ಯವನ್ನು ಒಪ್ಪಿಕೊಳ್ಳುವುದಕ್ಕಿಂತ ಸಾಯೋದೇ ಮೇಲು ಎಂದು ನಂಬಿದ ಯುರೋಪಿಯನ್ನರು ಹಲವರಿದ್ದಾರೆ,'' ಅಂತಲೂ ಬರೆಯುತ್ತಾನೆ.

ಬ್ರಿಟಿಷ್ ಮೂಲದ ಜೀವಶಾಸ್ತ್ರಜ್ಞ ಜೆ.ಬಿ.ಎಸ್. ಹಾಲ್ಡೇನ್, ತನ್ನ ಬದುಕಿನ ಉತ್ತರಾರ್ಧದಲ್ಲಿ ಭಾರತೀಯ ಪೌರತ್ವ ಪಡೆದು, ಕೋಲ್ಕತ್ತಾದಲ್ಲಿ ನೆಲೆಸಿದ್ದರು. ಅಲ್ಲಿನ ರಸ್ಟೆಬದಿಯ ಮಾವಿನ ಹಣ್ಣನ್ನು ಕೊಂಡು ಆಗಾಗ ರುಚಿ ನೋಡುತ್ತಿದ್ದರು.



ಆದರೆ, ಅದನ್ನು ತಿನ್ನುವ ರಗಳೆಗಳು, ಅವರ ಬ್ರಿಟಿಷ್ ಟೇಬಲ್ ಮ್ಯಾನರ್ಸ್ ಸರಿಹೊಂದುತ್ತಿರಲಿಲ್ಲ. ಅವರ ಮಕ್ಕಳ ಕತೆ ಪುಸ್ತಕವೊಂದರಲ್ಲಿ ಜಾದೂಗಾರನೊಬ್ಬ ಕಥಾನಾಯಕನಿಗೆ ಮಂತ್ರಿಸಿದ ಮಾವಿನ ಹಣ್ಣನ್ನು ಕೊಡುತ್ತಾನೆ. ಅದರ ವಿಶೇಷವೆಂದರೆ ತಿನ್ನುವಾಗ ಮೈಕೈ ತುಂಬಾ ಸುರಿಯುವುದಿಲ್ಲ. ಈ ವಿಶೇಷ ಮಾವನ್ನು ತಿನ್ನುವಾಗ ಪರೀಕ್ಷಿಸಲೆಂದು ಕಥಾನಾಯಕ ಜಾಕೆಟ್ ಮೇಲೆ ರಸ ಚೆಲ್ಲಿಕೊಳ್ಳಲು ಯತ್ನಿಸ್ತಾನೆ, ಆದರೆ ಅದು ಜಂಪ್ ಮಾಡಿ ಮರಳಿ ಬಾಯಿಗೆ ಹೋಗುತ್ತೆ! ಮಾಂತ್ರಿಕ ಮಂತ್ರಿಸದೇ ಕೊಟ್ಟ ಇನ್ನುಳಿದ ಸಾಮಾನ್ಯ ಮಾವುಗಳನ್ನು ಮನೆಗೆ ತಂದು ಬಾತ್‌ರೂಮ್‌ನಲ್ಲಿ ಮೊಣಕೈ ತುಂಬಾ ಸುರಿಸಿಕೊಳ್ಳುತ್ತಾ ತಿನ್ನುವ ಪ್ರಸಂಗವಿದೆ. ಹಾಲ್ಡೇನ್ ಕತೆಯಲ್ಲಿ ಮಾತ್ರವಲ್ಲ, ಆ ಕಾಲದ ಅನೇಕ ಯುರೋಪಿಯನ್ನರು ಮಾವಿನ ಹಣ್ಣನ್ನು ಬಾತ್‌ರೂಂ ಫ್ರೂಟ್ ಅಂತಲೇ ಕರೆದು, ಕದ್ದು ಮುಚ್ಚಿ ಒಬ್ಬರೇ ತಿನ್ನುತ್ತಿದ್ದರಂತೆ.

ಬಂಗಾಳಿ ಹಾಸ್ಯ ಲೇಖಕ ಪರಶುರಾಮ್ ಅವರ 'ಉಲ್ಟಾ-ಪುರಾಣ'ದಲ್ಲಿ, ಭಾರತೀಯರು ಬ್ರಿಟನ್ ಗೆದ್ದು ಅಲ್ಲಿಗೆ ಸ್ಥಳೀಯ ಬ್ರಿಟಿಷ್ ಗವರ್ನರ್ ಒಬ್ಬನನ್ನು ನೇಮಿಸುತ್ತಾರೆ. ಆತ ತನ್ನ ಭಾರತೀಯ ಮೇಲಧಿಕಾರಿಗಳ ಹಾಗೆ ಮಾವು ತಿನ್ನಲು ಕಲಿಯಲು ಪ್ರಯತ್ನಿಸುತ್ತಾ, ಬಾತ್‌ರೂಮಿನಲ್ಲಿ ಗುಟ್ಟಾಗಿ ರಸ ಸುರಿಸುತ್ತಾ ತಿನ್ನಲು ಅಭ್ಯಾಸ ಮಾಡುವ ಪ್ರಸಂಗ ಬರುತ್ತದೆ. ವರ್ಷಗಳ ನಂತರ, ಈ 'ಉಲ್ಟಾ-ಪುರಾಣ' ಒಂದು ರೀತಿಯಲ್ಲಿ ನಿಜವಾಗಿ, ಭಾರತೀಯ ಮೂಲದ ರಿಷಿ ಸುನಕ್ ಪ್ರಧಾನಿಯಾಗಿದ್ದರಷ್ಟೇ? ಆಗ ಕೆಲವು ರಾಜತಾಂತ್ರಿಕ ಸಭೆಗಳಲ್ಲಿ ಅವರು ಮಾವಿನಹಣ್ಣಿನ ರಸ ಕುಡಿಯುವುದನ್ನು ಬ್ರಿಟಿಷ್ ಮಾಧ್ಯಮಗಳು ಫೋಟೊ ಸಮೇತ ಪ್ರಕಟಿಸಿದ್ದವು.

'ಹಸಿದು ಹಲಸು ತಿನ್ನಿ ಉಂಡು ಮಾವು ತಿನ್ನಿ' ಅಂತ ಕನ್ನಡದ ಗಾದೆ ಮಾತಿದೆಯಷ್ಟೇ. ಭಾರತೀಯರು ಸಾವಿರಾರು ವರ್ಷಗಳಿಂದ ಈ ಎರಡು ಹಣ್ಣುಗಳನ್ನು ಬಳಸುತ್ತಿದ್ದರೂ, ಅವುಗಳನ್ನು ತಿನ್ನುವ ರಗಳೆಗಳಿಂದಾಗಿ ವಿದೇಶಿಯರು ದೂರವೇ ಇಟ್ಟಿದ್ದರು. ಆದರೆ, ಈಗ ಸನ್ನಿವೇಶ ಬದಲಾಗುತ್ತಿದೆ. ಒಮ್ಮೆ ಉಪೇಕ್ಷಿಸಲ್ಪಟ್ಟ ಹಲಸು, ಈಗ ಪಾಶ್ಚಿಮಾತ್ಯ ದೇಶಗಳಲ್ಲಿ 'ವೇಗನ್ ಆಹಾರ ಪದ್ಧತಿಯಲ್ಲಿ 'ಬದಲಿ ಮಾಂಸ'ವಾಗಿ ಜನಪ್ರಿಯವಾಗುತ್ತಿದೆ. ಕತ್ತರಿಸಿ ಸಂಸ್ಕರಿಸಿದ ಹಲಸು ದೊಡ್ಡ ಪ್ರಮಾಣದಲ್ಲಿ ರಫ್ತಾಗುತ್ತಿದೆ. ತಿನ್ನಲು, ಅಡುಗೆ ಮಾಡಲು ಸಿದ್ಧವಾದ ಹಲಸು ಭಾರತದ ಮಾರುಕಟ್ಟೆಗಳಲ್ಲೂ ಲಭ್ಯವಾಗುತ್ತಿದೆ. ಮಾವಿನ ಹಣ್ಣಿನಲ್ಲಿ ಕಡಿಮೆ ನಾರಿನ ತಳಿಗಳು ಅಭಿವೃದ್ಧಿಪಡಿಸಲಾಗಿದೆ. ಹೀಗಾಗಿ ಅವುಗಳನ್ನು ಹೋಳು ಮಾಡಿ ಸವಿಯೋದು ಸುಲಭವಾಗಿದೆ. ಹಿಂದೊಮ್ಮೆ, ಬಾತ್‌ರೂಂ ಫ್ರೂಟ್ ಎನಿಸಿಕೊಂಡಿದ್ದವುಗಳು ಈಗ ಸುಲಭವಾದ 'ಟೇಬಲ್ ಡಿಲೈಟ್' ಆಗಿವೆ. ಜತೆಗೆ, ಜಾಮ್, ಜೆಲ್ಲಿ, ಜ್ಯೂಸ್‌ನಂಥ ಮೌಲ್ಯವರ್ಧಿತ ಉತ್ಪನ್ನಗಳು ರೈತರಿಗೆ ಹೊಸ ಆರ್ಥಿಕ ಅವಕಾಶಗಳನ್ನು ತಂದುಕೊಡುತ್ತಿವೆ. ಮಾವು ಹಲಸಷ್ಟೇ ಅಲ್ಲ, ನಮ್ಮಲ್ಲಿ ನೂರೆಂಟು ಬಗೆಯ ಕಾಡು ಹಣ್ಣುಗಳೂ ಇವೆ. ಇವುಗಳಿಗೂ ಹೀಗೆಯೇ ಮುಂದೆಂದಾದರೂ ಶುಕ್ರದೆಸೆ ಬಂದೀತೇ?

(ಲೇಖಕರು: ಪರಿಸರ ವಿಜ್ಞಾನಿ)